ಒ.ಎಸ್. ನಂ.61/2018
ಪಿಡಬ್ಲು-1

ದಿನಾಂಕ 01.02.2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಎಂ. ವಕೀಲರಿಂದ

ದಾವಾ ಆಸ್ತಿಯ ಪೂರ್ವಕ್ಕೆ ವಿನೋದ ಕುಲಕರ್ಣಿ ರವರ ಮನೆ, ಪಶ್ಚಿಮಕ್ಕೆ ಪೋಲಿಸ್ ಇಲಾಖೆಗೆ ಸೇರಿದ ಜಮೀನು, ಉತ್ತರಕ್ಕೆ ನನ್ನ ಜಾಗೆ, ದಕ್ಷಿಣಕ್ಕೆ ಸಚ್ಚಿದಾನಂದ ಆಶ್ರಮದ ಜಾಗ ಇದೆ. ಉತ್ತರಕ್ಕೆ ವಾದಿಯ ಸಂಸ್ಥೆಯ ಜಾಗ ಇದೆ. ದಾವಾ ಸ್ವತ್ತು ವಾದಿ ಸಂಸ್ಥೆಯ ಸ್ತತ್ತು ಎಂದು ದಾವೆ ಸಲ್ಲಿಸಿದ್ದೇನೆ. ದಾವಾ ಸ್ವತ್ತು 2-ಎಕರೆ 39-ಗುಂಟೆ ಇದೆ. 33 x35 ವಿಸ್ತೀರ್ಣವುಳ್ಳ ಸ್ವತ್ತು ವಾದಿ ಸಂಸ್ಥೆಗೆ ಸೇರಿರುತ್ತದೆ. ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದೇವೆಂದು ನನಗೆ ನೆನಪಿಲ್ಲ. ಸರ್ವೆ ನಂ.74/7 ರ ಸ್ವತ್ತು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ವಿಜಯ ತಂದೆ ಭಗವಂತ್ರಾವ ಕುಲಕರ್ಣಿಯವರಿಂದ ರೂ.1,40,000/- ಗಳಿಗೆ ಸರ್ವೆ ನಂ.74/7 ರಲ್ಲಿ 33 x 35 ರ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗೆಯ ಪೂರ್ವಕ್ಕೆ ಬಯಲು ನಿವೇಶನ, ಪಶ್ಚಿಮಕ್ಕೆ ವಾದಿ ಸಂಸ್ಥೆಯ ಸ್ವತ್ತು, ಉತ್ತರಕ್ಕೆ 20 ಅಡಿ ರಸ್ತೆ, ದಕ್ಷಿಣಕ್ಕೆ ಗಣಪತಿ ಸಚ್ಚಿದಾನಂದ ರವರ ಸ್ವತ್ತು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಯರ ಸ್ವತ್ತು ಬೇರೆ ಬೇರೆ ಇದ್ದು ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕಬಂದಿ ಹಾಗೂ ಪ್ರತಿವಾದಿಯರ

ಸ್ವತ್ತಿನ ಚೆಕಬಂದಿ ಬೇರೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ಏನಾದರೂ ಪಡೆಯಲು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಕಟ್ಟಡವಿರುತ್ತದೆ ಎಂದರೆ ಸಾಕ್ಷಿಯು ಒಂದು ಮಹಡಿ ಕಟ್ಟಿದ್ದು ಇನ್ನೂ ಒಂದು ಮಹಡಿ ಕಟ್ಟುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರೂ ಯಾವುದೇ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ.
ದಂಡಾಧಿಕಾರಿಗಳ
ಅಫಜಲಪೂರ